**ಓ.ಎಸ್. ನಂಃ 87/2026**

**ಪಿ ಡಬ್ಲ್ಯೂಃ 1**

**ಸಾಕ್ಷಿಯನ್ನು ದಿಃ 09.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಮರಾಠಿ/ಹಿಂದಿ ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀ BMB ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ಪ್ರತಿವಾದಿಯರ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿ/ಹಿಂದಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿ/ಹಿಂದಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.200/- ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

**ಮುಖ್ಯ ವಿಚಾರಣೆ:** ವಾದಿ ಪರ ವಕೀಲರಾದ ಶ್ರೀ G.C.K. ರವರಿಂದಃ

ಮುಖ್ಯ ವಿಚಾರಣೆ ಬದಲಾಗಿ ನಾನು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದನ್ನು ನಾನು ಹೇಳಿ ಬರೆಸಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರಗಳು ಸರಿ ಮತ್ತು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ನಾನು ದಾಖಲೆಗಳನ್ನು ಹಾಜರುಪಡಿಸುತ್ತಿದ್ದು, ಅವುಗಳನ್ನು ಈ ಕೆಳಕಂಡಂತೆ ಗುರುತಿಸಿಕೊಳ್ಳುತ್ತಿದ್ದೇನೆ.

| | |
|---|---|
| **ನಿಪಿ-1 ರಿಂದ 8** | 8 ಆಧಾರ ಕಾರ್ಡಗಳು |
| **ನಿಪಿ-9** | ಮರಣ ಪ್ರಮಾಣ ಪತ್ರ |

**ಪಾಟೀ ಸವಾಲುಃ ಮಾನ್ಯ ಡಿಜಿಪಿರವರಿಂದ ಃ**

ಜಾನಾತಾಯಿ ರಾಮಚಂದ್ರ ಯಾದವ ನನ್ನ ಸಹೋದರಿ. ನನ್ನ ತಂದೆಯ ಹೆಸರು

**ಓ.ಎಸ್. ನಂಃ 87/2026**

**ಪಿ ಡಬ್ಲ್ಯೂಃ 1**

ರಾಮಚಂದ್ರ. ರಾಮಚಂದ್ರನಿಗೆ 3 ಜನ ಹೆಣ್ಣು ಮಕ್ಕಳು ಹಾಗೂ 4 ಜನ ಗಂಡು ಮಕ್ಕಳು. ಜಾನಾತಾಯಿಯನ್ನು ಸೇರಿ 3 ಜನ ಹೆಣ್ಣು ಮಕ್ಕಳು. ನನ್ನ ತಂದೆಯ ಮಕ್ಕಳು ಹೆಸರು ಶಾಲನ, ಸುಶೀಲಾ, ಜಾನಾತಾಯಿ, ಪರಶುರಾಮ, ನಾಮದೇವ ಅಂದರೆ ನಾನು, ಹಣಮಂತ ಮತ್ತು ಶಂಕರ. ನನ್ನನ್ನು ಹೊರತುಪಡಿಸಿ ಉಳಿದ 6 ಜನರು ಮೃತ ಪಟ್ಟಿದ್ದಾರೆ. ನಾನು 6 ಜನರ ಮರಣ ಪ್ರಮಾಣ ಪತ್ರ ಹಾಜರು ಮಾಡಿಲ್ಲ ಎಂದರೆ ಸರಿ.

ಹನಮಂತ ಮೃತ ಪಟ್ಟ ನಂತರ ವಾರಸಾ ಪ್ರಮಾಣ ಪತ್ರ ಪಡೆದುಕೊಂಡ ಬಗ್ಗೆ ನನಗೆ ಮಾಹಿತಿ ಇಲ್ಲ. ಶಂಕರ ಮೃತ ಪಟ್ಟ ನಂತರ ವಾರಸಾ ಪ್ರಮಾಣ ಪತ್ರ ಪಡೆದುಕೊಂಡ ಬಗ್ಗೆ ನನಗೆ ಮಾಹಿತಿ ಇಲ್ಲ. ಪರಶುರಾಮ ಮೃತ ಪಟ್ಟ ನಂತರ ವಾರಸಾ ಪ್ರಮಾಣ ಪತ್ರ ಪಡೆದುಕೊಂಡ ಬಗ್ಗೆ ನನಗೆ ಮಾಹಿತಿ ಇಲ್ಲ. ಪರಶುರಾಮ ರವರ ಮಕ್ಕಳ ಹೆಸರು ನಿಖಿಲ ಅಲಿಯಾಸ ವೈಜನಾಥ ಯಾದವ, ವಿಕ್ಕಿ ಯಾದವ, ಪೂಜಾ ಯಾದವ.

ಶಂಕರರವರಿಗೆ ಮೂರು ಜನ ಹೆಣ್ಣು ಮಕ್ಕಳು. ಆದರೆ ಅವರ ಹೆಸರು ನೆನಪಿಲ್ಲ. ಹನಮಂತ ರವರಿಗೆ 2 ಜನ ಗಂಡು ಮಕ್ಕಳು. ಅವರು ಹೆಸರು ಭರತ ಮತ್ತು ದೀಪಕ.

ಜಾನಾತಾಯಿ ಮನೆಯಲ್ಲಿ ಇರುತ್ತಿದ್ದಳು. ಜಾನಾತಾಯಿಗೆ ಮದುವೆ ಆಗಿಲ್ಲ. ಜಾನಾತಾಯಿ ಮದುವೆ ಆಗುವುದಿಲ್ಲ ಎಂದು ಹೇಳಿದಳು. ಜಾನಾತಾಯಿ ಹೆಸರಿನಲ್ಲಿ ಆಸ್ತಿ ಇಲ್ಲ. ಜಾನಾತಾಯಿಗೂ ಸಹ ಮನೆಯಲ್ಲಿ ಹಕ್ಕು ಇರುವುದರಿಂದ ವಾರಸಾ ಪ್ರಮಾಣ ಪತ್ರ ಬೇಕಾಗಿದೆ. ಜಾನಾತಾಯಿ ಮರಣ ಹೊಂದಿದ ನಂತರ ತಹಸಿಲ್ದಾರರವರಿಂದ ವಾರಸಾ ಪ್ರಮಾಣ ಪತ್ರ ಪಡೆಯಲು ತೊಂದರೆ ಇರಲಿಲ್ಲ. ತಹಸಿಲ್ದಾರರಿಗೆ ಅರ್ಜಿ ಕೊಟ್ಟಿದರೆ

**ಓ.ಎಸ್. ನಂಃ 87/2026**

**ಪಿ ಡಬ್ಲ್ಯೂಃ 1**

ವಾರಸುದಾರರು ಯಾರು ಎಂದು ಗೊತ್ತಾಗುತ್ತದೆ ಎಂದು ಅರ್ಜಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಜಾನಾತಾಯಿಗೂ ಮತ್ತು ವಾದಿಗಳಿಗೂ ಇರುವ ಸಂಬಂಧವನ್ನು ತೋರಿಸುವ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

Sd/-

**1ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಬೆಳಗಾವಿ.**